ಇಂದು ದಿನಾಂಕಃ03.01.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ. ಎಸ್ ಜಿ ಎಂ ವಕೀಲರಿಂದಃ

1. ನಾನು ಎಂ ಬಿ ಎ ಪದವೀಧರ. ನಾನು ಶಿವಮೊಗ್ಗ ಪಿ ಎಸ್ ಕಾಲೇಜಿನಲ್ಲಿ 2010 ರಲ್ಲಿ ಎಂ ಬಿ ಎ ಮುಗಿಸಿರುತ್ತೇನೆ. ನಾನು ಕಂಟ್ರಾಕ್ಟ್ ಕೆಲಸವನ್ನು ಮಾಡಲು ಪರವಾನಗಿ ಪಡೆದಿಲ್ಲ. ಕಂಟ್ರಾಕ್ಟ್ ಕೆಲಸಕ್ಕಿಂತ ಮೊದಲು ನಾನು 2010 ರಿಂ 2014 ರವರೆಗೆ ಜೆ ಎಸ್ ಡಬ್ಲ್ಯೂ ಸ್ಟೀಲ್, ಬಳ್ಳಾರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿಯಲ್ಲಿ ಕೆಲಸವನ್ನು ನಾನೇ ಬಿಟ್ಟಿರುತ್ತೇನೆ. ನಾನು ಅರ್ಥ್ ಲೆವೆಲ್ ಕಂಟ್ರ್ಯಾಕ್ಟ್ ಕೆಲಸವನ್ನು ಮಾಡುತ್ತಿದ್ದೆ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಾನು ಕಂಟ್ರ್ಯಾಕ್ಟ್ ಕೆಲಸ ಮಾಡುವುದರಿಂದ ಎಷ್ಟು ಆದಾಯ ಬರುತ್ತದೆ ಎಂದು ಸರ್ಕಾರಿಕ್ಕೆ ಘೋಷಣೆ ಮಾಡಿರುವುದಿಲ್ಲ.

2. ನನಗೆ ಮತ್ತು ಆರೋಪಿಗೆ ಯಾವುದೇ ರೀತಿಯ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ಈ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ನಂತರವೇ ನೋಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿ ನನಗೆ 2014 ರಿಂದಲೂ ಪರಿಚಯ ಇರುತ್ತಾರೆಂದು ನುಡಿಯುತ್ತಾರೆ. ನಾನು 2014 ರಲ್ಲಿ ಕೆಲಸ ಬಿಟ್ಟ ನಂತರ ನಮ್ಮ ತಂದೆಯ ಆಸ್ತಿಯನ್ನು ಮಾರಾಟ ಮಾಡಲು ಆರೋಪಿಯು ನಡೆಸುತ್ತಿದ್ದ ಮಾತೃ ಲ್ಯಾಂಡ್ ಡೆವೆಲಪರ್ಸ್ ಗೆ ಭೇಟಿ ನೀಡಿದಾಗ ಆರೋಪಿ ಪರಿಚಯವಾಗಿರುತ್ತದೆ. ಸದರಿ ಡೆವೆಲಪಸ್ರ ಗೆ ಹೋಗಲು ನನಗೆ ಯಾರು ಮಾಹಿತಿ ನೀಡಿಲ್ಲ. ನಾನು ಅದೇ ಏರಿಯಾದವನಾದ್ದರಿಂದ ಅಲ್ಲಿಗೆ ಹೋಗಿರುತ್ತೇನೆ. ನಾನು ಯಲಹಂಕದಲ್ಲಿ ಕೇವಲ 6 ತಿಂಗಳು ಮಾತ್ರ ವಾಸವಿದ್ದೆ. ನಾನು ಜೂನ್ 2014 ರಿಂದ ಡಿಸೆಂಬರ್ ವರೆಗೆ ಯಲಹಂಕದಲ್ಲಿ ಸ್ನೇಹಿತ ಪ್ರವೀಣನ ಮನೆಯಲ್ಲಿ ವಾಸವಿದ್ದೆ.

3. ನಾನು ಪ್ರಾರಂಭದಲ್ಲಿ 15 ದಿನಗಳಿಗೊಮ್ಮೆ ಆರೋಪಿಯ ಮಾತೃ ಡೆವಲಪರ್ಸ್ ಗೆ ಭೇಟಿ ನೀಡುತ್ತಿದ್ದೆ. ನನಗೆ ಆರೋಪಿಯೊಂದಿಗೆ ದೂರವಾಣಿ ಸಂಪರ್ಕ ಇತ್ತು. ನಾನು ದೂರವಾಣಿ ಮೂಲಕ ಆತನೊಂದಿಗೆ ಮಾತನಾಡುತ್ತಿದ್ದೆ. 2014 ರಿಂದ 2018 ರವರೆಗೆ ನಾನು ಬಳಸುತ್ತಿದ್ದ ಮೊಬೈಲ್ ನಂಬರ್ ಈಗ ನನಗೆ ನೆನಪಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಹಳೆ ನಂಬರನ್ನು ಬದಲಾಯಿಸಿ ಹೊಸ ನಂಬರನ್ನು ಬಳಸುತ್ತಿದ್ದೇನೆಂದು ನುಡಿಯುತ್ತಾರೆ. ನನ್ನ ಹಳೆಯ ಫೋನ್ ನಂಬರನ್ನು ನ್ಯಾಯಾಲಯಕ್ಕೆ ಕೊಡಬಹುದು ಎಂದರೆ ಸಾಕ್ಷಿಯು ಸಂಗ್ರಹಿಸಿ ಕೊಡಬಹುದು ಎಂದು ನುಡಿಯುತ್ತಾರೆ. ನಾನು ಆರೋಪಿಯೊಂದಿಗೆ ಯಾವತ್ತೂ ಸಹ ದೂರವಾಣಿ ಕರೆ ಮೂಲಕ ಮಾತನಾಡಿಲ್ಲ ಎಂದರೆ ಸರಿಯಲ್ಲ. ನನ್ನ ಕಾಲ್ ಡೀಟೇಲ್ಸ್ ತೆಗೆದರೆ ಆರೋಪಿಯೊಂದಿಗೆ ನಾನು ಮಾತನಾಡಿದ್ದೆನೋ ಅಥವಾ ಅಲ್ಲವೋ ಎನ್ನುವುದರ ಬಗ್ಗೆ ತಿಳಿಯುತ್ತದೆ ಎಂಬ ಕಾರಣಕ್ಕೆ ನಾನು

ನ್ಯಾಯಾಲಯಕ್ಕೆ ನನ್ನ ಹಳೆಯ ಫೋನ್ ನಂಬರನ್ನು ತಿಳಿಸುತ್ತಿಲ್ಲ ಎಂದರೆ ಸರಿಯಲ್ಲ.

4. ನಾನು ಈಗ ಬಳಸುತ್ತಿರುವ ಮೊಬೈಲ್ ನಂಬರನ್ನು ಕಳೆದ 2 ವರ್ಷಗಳಿಂದ ಉಪಯೋಗಿಸುತ್ತಿದ್ದೇನೆ. ನನಗೆ ಮತ್ತು ಆರೋಪಿಗೆ ಯಾವುದೇ ಕಾಮನ್ ಫ್ರೆಂಡ್ ಇಲ್ಲ. ಆರೋಪಿ ನನ್ನ ಬಳಿಯಿಂದ 2018 ಏಪ್ರಿಲ್ ತಿಂಗಳಲ್ಲಿ ಹಣ ಕೇಳಿರುತ್ತಾರೆ. 2018 ರಲ್ಲಿ ಮಾತೃ ಕನ್ಸಟ್ರೆಕ್ಷನ್ಸ್ ಕಾರ್ಯ ನಿರ್ವಹಿಸುತ್ತಿತ್ತೋ ಇಲ್ಲವೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. 2014 ರಿಂದ 2018 ರವರೆಗೆ ಮಾತೃ ಕನ್ಸಟ್ರೆಕ್ಷನ್ಸ್ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಆರೋಪಿಯನ್ನು ನಾನು ವಿಚಾರಿಸಿದ್ದೆ, ಆಗ ಆರೋಪಿ ಅದು ಅಸ್ತಿತ್ವದಲ್ಲಿದೆ ಎಂದು ತಿಳಿಸಿದ್ದರು. 2014 ರಿಂದ 2018 ರ ಅವಧಿಯಲ್ಲಿ ಆರೋಪಿಯನ್ನು ನಾನು ನ್ಯಾಮತಿ ಮತ್ತು ಚಿಕ್ಕಮಗಳೂರಿನಲ್ಲಿ ಭೇಟಿಯಾಗಿದ್ದೆ. ಕಡೆಯದಾಗಿ ಆರೋಪಿಯನ್ನು ನಾನು ಮೇ 18,  2018 ರಂದು ನಮ್ಮ ಮನೆಯಲ್ಲಿ ಭೇಟಿಯಾಗಿದ್ದೆ. ನಾನು ಹಣವನ್ನು ನೀಡುವ 15 ದಿನದ ಮೊದಲು ಆರೋಪಿ ಶೃಂಗೇರಿಯ ಮೆಣಸೆ ರೋಡ್ ನಲ್ಲಿ ತಮ್ಮ ಕೆಲಸ ಮಾಡಿಸುತ್ತಿದ್ದಾಗ ನನ್ನನ್ನು ಭೇಟಿಯಾಗಿರುತ್ತಾರೆ. ಆರೋಪಿಗೆ ಶೃಂಗೇರಿಯಲ್ಲಿ ಯಾವುದೇ ಸಂಬಂಧಿಕರು ಇಲ್ಲ ಎಂದರೆ ಸಾಕ್ಷಿಯು ಅವರು 2015-16 ರಲ್ಲಿ ಶೃಂಗೇರಿಯಲ್ಲಿ ಕೆಲಸ ಮಾಡಿಸುತ್ತಿದ್ದರು ಎಂದು ನುಡಿಯುತ್ತಾರೆ.

5. ಶೃಂಗೇರಿಗೆ  ಆರೋಪಿ ಯಾವ ದಿನ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಆದರೆ ದಿನಾಂಕಃ 18.05.2018 ರಂದು ಹಣ ತೆಗೆದುಕೊಳ್ಳಲು ನನ್ನ ಮನೆಗೆ ಬಂದಿದ್ದರು. ಹಣ ನೀಡುವ 15 ದಿನದ ಪೂರ್ವದಲ್ಲಿ ಆರೋಪಿ ನನ್ನನ್ನು ಭೇಟಿಯಾದಾಗ 15 ದಿನದಲ್ಲಿ ಬರುವುದಾಗಿ ತಿಳಿಸಿದ್ದರು. ಆ ನಂತರ ನನ್ನ ಮತ್ತು ಆರೋಪಿ ನಡುವೆ ಯಾವುದೇ ದೂರವಾಣಿ ಮಾತುಕತೆ ನಡೆದಿರುವುದಿಲ್ಲ. ಸಾಧಾರಣವಾಗಿ ಇತ್ತೀಚಿನ ವ್ಯವಹಾರಿಕತೆಯಲ್ಲಿ ಹಣದ ಮಾತುಕತೆ ಇದ್ದರೆ ದೂರವಾಣಿ ಕರೆ ಮಾಡಿ ಬರುತ್ತಾರೆಂದರೆ ಸಾಕ್ಷಿಯು ಆರೋಪಿಯು 15 ದಿನದ ಒಳಗಾಗಿ ಬರುವುದಾಗಿ ನನಗೆ ತಿಳಿಸಿದ್ದರಿಂದ ಯಾವುದೇ ದೂರವಾಣಿ ಮಾಡಿಲ್ಲ ಎಂದು ನುಡಿಯುತ್ತಾರೆ. ಹಣ ತೆಗೆದುಕೊಳ್ಳುವ 15 ದಿನಗಳ ಪೂರ್ವದಲ್ಲಿ ಶೃಂಗೇರಿಯಲ್ಲಿ ಸಿಕ್ಕಾಗಲೂ ಸಹ ಅವರು ಶೃಂಗೇರಿಗೆ ಬರುವುದಾಗಿ ನನಗೆ ಫೋನ್ ಮೂಲಕ ತಿಳಿಸಿರಲಿಲ್ಲ. ಆರೋಪಿ ಶೃಂಗೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸಿಕ್ಕ 15 ದಿನಗಳ ಪೂರ್ವದಲ್ಲಿ ನನಗೆ ಸಿಕ್ಕಿ 15 ದಿನಗಳ ನಂತರ ಕೆಲಸ ಮಾಡಿಸುವ ವೇಳೆ ನನಗೆ ಸಿಗುವುದಾಗಿ ನನಗೆ ತಿಳಿಸಿದ್ದರು. 2018 ರಲ್ಲಿ ಆರೋಪಿ ಯಾವುದೇ ಕೆಲಸ ಮಾಡಿಸುತ್ತಿರಲಿಲ್ಲ ಎಂದರೆ ಸರಿ.

6. ಸೇತುವೆ ಹತ್ತಿರ ಇರುವ ಆರೋಪಿಯು ಕೆಲಸ ಮಾಡಿಸುವ ಸೈಟ್ ಹತ್ತಿರ ನಾವು ಯಾವಾಗಲು ಭೇಟಿಯಾಗುತ್ತಿದ್ದೆವು ಆ ಕಾರಣದಿಂದ ಆರೋಪಿಯನ್ನು ನಾನು ಅಲ್ಲಿಯೇ ಭೇಟಿಯಾಗಿದ್ದೆ. ನಾನು ಶೃಂಗೇರಿಗೆ ಬಂದಾಗ ಅವರು ಕಾಣಿಸಿದ್ದರಿಂದ ನಾನು ಅವರನ್ನು ಭೇಟಿಯಾಗಿರುತ್ತೇನೆ. ಆದರೆ ಅವರು ಯಾವ ಸಮಯಕ್ಕೆ ಬರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ

ಇರಲಿಲ್ಲ. ಆರೋಪಿ 2016 ಆದ ನಂತರ ಶೃಂಗೇರಿಯಲ್ಲಿ ಯಾವುದೇ ಕೆಲಸ ಮಾಡಿಲ್ಲ ಎಂದರೆ ಸರಿ. ನಾನು ಆರೋಪಿಯನ್ನು ಭೇಟಿಯಾಗದೇ ಇರುವುದರಿಂದ ನಾನು ಯಾವುದೇ ಫೋನ್ ಮಾಡಿಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

7. ನಾನು ರೂ. 3,75,000/- ಗಳನ್ನು ರಂಜನಕಟ್ಟೆ, ತೀರ್ಥಹಳ್ಳಿಯಲ್ಲಿ ಅಡಿಕೆ ಮಾರಾಟ ಮಾಡಿ ತಂದಿದ್ದೆ. ಅದಕ್ಕೆ ಯಾವುದೇ ರಶೀದಿ ನನ್ನ ಬಳಿ ಇಲ್ಲ. ಹಣ ಪಡೆಯುವ ಕಾಲಕ್ಕೆ ಆರೋಪಿ ಕಾರಿನಲ್ಲಿ ತನ್ನ ಸ್ನೇಹಿತನೊಂದಿಗೆ ಬಂದಿದ್ದರು. ಆಗ ಆರೋಪಿ ಆರೋಗ್ಯದಿಂದಿದ್ದರು. ಸಾಕ್ಷಿಗೆ ಈಗ ಕೊಲಂಬಿಯಾ ಏಷ್ಯಾದ ಒಂದು ಪೇಶಂಟ್ ಬಿಲ್ಲನ್ನು ತೋರಿಸಲಾಗಿ ಸದರಿ ಬಿಲ್ ಪ್ರಕಾರ ಪೇಶಂಟ್ ಹೆಸರು ರೋಹಿತ್ ರಾಮವತ್ ಎಂದು ಸೂಚಿಸಲಾಗಿ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ಸದರಿ ದಾಖಲಾತಿಯನ್ನು ಒಪ್ಪಿಕೊಂಡ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಸದರಿ ದಾಖಲಾತಿಯು ರೋಹಿತ್ ಎಂಬ ವ್ಯಕ್ತಿಯ ಡಿಸ್ ಚಾರ್ಜ್ ಸಮ್ಮರಿ ಎಂದು ಸೂಚಿಸಲಾಗಿ ಅದನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲಾತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಆರೋಪಿ 10.05.2018 ರಿಂದ 15.05.2018 ರವರೆಗೆ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ತಮ್ಮ ಕಾಲಿನ ಗಂಟಿನ ಕೆಳಗಡೆ ಆಪರೇಶನ್ ಆದ ಕಾರಣ ಆಸ್ಪತ್ರೆಯಲ್ಲಿದಾಖಲಾಗಿದ್ದರು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

8. ಆರೋಪಿಗೆ ಮೇ 2018 ರಿಂದ ಜನವರಿ 2020 ರ ಅವಧಿಯಲ್ಲಿ ಎರಡು ಕಾಲಿನ ಗಂಟಿನ ಕೆಳಗಡೆ ಆಪರೇಶನ್ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. 2017 ಮಾರ್ಚ್ ನಿಂದ ಆರೋಪಿ ಸ್ವತಂತ್ರವಾಗಿ ನಡೆದಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಹೌದು, ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿ ಯಾವಾಗಲೂ ಬರುವಾಗ ಕಾರಿನಲ್ಲಿ ಬರುತ್ತಿದ್ದರು ಮತ್ತು ಜೊತೆಯಲ್ಲಿ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ದಿನಾಂಕಃ 10.05.2018 ರಂದು ಆರೋಪಿ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ 3 ತಿಂಗಳ ಕಾಲ ವಿಶ್ರಾಂತಿ ಹೇಳಿದ್ದರಿಂದ ಅವರು ಎಲ್ಲಿಯೂ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ಹಣದ ಅವಶ್ಯಕತೆ ಇದುದ್ದರಿಂದ ಅವರು ಕಾರಿನಲ್ಲಿ ಬಂದಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ಬೆಂಗಳೂರಿನಲ್ಲಿಯೇ ಓಡಾಡುವ ಸ್ಥಿತಿಯಲ್ಲಿರಲಿಲ್ಲ ಕಾರಣ ಶೃಂಗೇರಿಗೆ ಬರುವ ಸಾಧ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 10.05.2018 ರಂದು ಆರೋಪಿಗೆ ಕಾಲಿನ ಆಪರೇಶನ್ ಆದ 6 ತಿಂಗಳ ನಂತರ ಹೃದಯಾಘಾತವಾಗಿ ಹೃದಯ ಶಸ್ತ್ರಚಿಕಿತ್ಸೆ ಆಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ.

9. ದಿನಾಂಕಃ 18.05.2018 ರಂದು ಆರೋಪಿಯ ಜೊತೆಗೆ ಬಂದಿದ್ದ ವ್ಯಕ್ತಿ ನಿಪಿ-1 ರಲ್ಲಿರುವ ಚೆಕ್ಕಿನ ಸಂಗತಿಗಳನ್ನು ಬರೆದಿರುತ್ತಾರೆ ನಂತರ ಆರೋಪಿ ನನ್ನ ಎದುರು ತನ್ನ ಸಹಿ ಮಾಡಿ ನೀಡಿರುತ್ತಾರೆ. ಸಾಕ್ಷಿಗೆ ನಿಪಿ-1(ಎ) ಸಹಿಯನ್ನು ತೋರಿಸಿ ಸದರಿ ಸಹಿ ಆರೋಪಿಯ ಸಹಿಯೇ ಎಂದು ಕೇಳಲಾಗಿ ಸಾಕ್ಷಿಯು ನಾನು ಆರೋಪಿಯ ಸಹಿಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆರೋಪಿ ಪರ ವಕೀಲರು ಸಲ್ಲಿಸಿರುವ ವಾಕಲತ್ ನಲ್ಲಿರುವ ಆರೋಪಿಯ ಸಹಿ ಹಾಗೂ ನಿಪಿ-1(ಎ) ಸಹಿಗಳನ್ನು ತೋರಿಸಿ ಸದರಿ ಎರಡು ಸಹಿಗಳು ಒಬ್ಬರೆ ಮಾಡಿದ್ದಲ್ಲ ಎಂದು ಸೂಚಿಸಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಮಾನ್ಯವಾಗಿ ಚೆಕ್ಕಿನಲ್ಲಿ ಖಾತೆದಾರರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಆರೋಪಿಯ ಹೆಸರು ಇಲ್ಲ ಎಂದರೆ ಸಾಕ್ಷಿಯು ಮಾತೃ ಕನ್ಸ್ಟ್ರಕ್ಷನ್ ಎಂದು ಹೆಸರು ಇದೆ ಎಂದು ನುಡಿಯುತ್ತಾರೆ. ಮಾತೃ ಕನ್ಸ್ಟ್ರಕ್ಷನ್ ಆರೋಪಿ ಹೆಸರಿನಲ್ಲಿ ನೊಂದಣಿಯಾಗಿಲ್ಲ ಮತ್ತು ಅದನ್ನು ಆರೋಪಿ ಅದರ ಸೈನಿಂಗ್ ಆಥಾರಿಟಿ ಅಲ್ಲ ಎಂದರೆ ಸಾಕ್ಷಿಯು ಮಾತೃ ಕನ್ಸ್ಟ್ರಕ್ಷನ್ ಆರೋಪಿ ಹೆಂಡತಿ ಹೆಸರಿನಲ್ಲಿ ನೊಂದಣಿಯಾಗಿದ್ದು ಅದನ್ನು ಆರೋಪಿಯೇ ನಡೆಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿ ಚೆಕ್ ನೀಡಿದ್ದರಿಂದ ಆತನ ವಿರುದ್ಧವೇ ದೂರು ದಾಖಲು ಮಾಡಿದ್ದೇನೆಂದು ನುಡಿಯುತ್ತಾರೆ.

10. ಆರೋಪಿಯು ಮಾತೃ ಕನ್ಸ್ ಟ್ರಕ್ಷನ್ ಸಂಸ್ಥೆಯ ಸೈನಿಂಗ್ ಆಥಾರಿಟಿ ಅಲ್ಲ ಎಂದರೆ ಸಾಕ್ಷಿಯು ಆರೋಪಿಯು ಸದರಿ ಸಂಸ್ಥೆಯನ್ನು ನಡೆಸುತ್ತಿದ್ದರಿಂದ ಆರೋಪಿಯು ನೀಡಿದ ನಿಪಿ-1 ಚೆಕ್ಕನ್ನು ನಾನು ಸ್ವೀಕರಿಸಿದ್ದೇನೆಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ಸಹಿ ಆರೋಪಿಯ ಸಹಿಯಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಸಹಿ ಆರೋಪಿಗೆ ಸೇರಿದ್ದಲ್ಲ ಎಂದು ತಿಳಿದಿದ್ದರೂ ಸಹ ಹಾಗೂ ಆರೋಪಿಯು ಮಾತೃ ಕನ್ಸ್ಟ್ರಕ್ಷನ್ ನ ಸೈನಿಂಗ್ ಆಥಾರಿಟಿ ಅಲ್ಲ ಎಂದು ತಿಳಿದಿದ್ದರೂ ಸಹ ದುರುದ್ದೇಶ ಪೂರಕವಾಗಿ ಈ ಸುಳ್ಳು ದೂರು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ಮಾತೃ ಕನ್ಸ್ಟ್ರಕ್ಷನ್ ಸಂಸ್ಥೆ ಮೇಲೆ ನಾನು ಯಾವುದೇ ದೂರು ದಾಖಲು ಮಾಡಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಸಂಪರ್ಕ ಇಲ್ಲದಿರುವುದರಿಂದ ನಾನು ಆರೋಪಿಗೆ ಹಣ ತೆಗೆದುಕೊಳ್ಳುವ ಸಮಯದಲ್ಲಿ ಹಾಗೂ ಭೇಟಿಯಾಗುವ ಸಂದರ್ಭದಲ್ಲಿ ಫೋನ್ ಮಾಡಿಲ್ಲ ಎಂದು ಕಟ್ಟುಕತೆ ಹೇಳುತ್ತಿದ್ದೇನೆಂದರೆ ಸರಿಯಲ್ಲ.ನನಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

11. ನಾನು ಮಾತೃ ಕನ್ಸ್ಟ್ರಕ್ಷನ್ ಗೆ ಸಂಬಂಧಿಸಿದ ಒಂದು ಚೆಕ್ಕನ್ನು 3 ನೇ ವ್ಯಕ್ತಿಯಿಂದ ಪಡೆದುಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆಂದರೆ ಸರಿಯಲ್ಲ. 2017 ರಿಂದ ಆರೋಪಿ ಹಾಗೂ ಆತನ ಹೆಂಡತಿಯ ನಡುವೆ ವಿವಾದ ಉಂಟಾಗಿ ಪ್ರಕರಣ ನ್ಯಾಯಾಲಯದಲ್ಲಿ ವಿಲೇ ಇದೆ ಎಂದರೆ ಸಾಕ್ಷಿಯು ಆ ವಿಚಾರವನ್ನು ಆರೋಪಿ ನನಗೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ 2017 ರಲ್ಲಿಯೇ ನಿಪಿ-1 ಚೆಕ್ ನ ಖಾತೆಯು ಮುಕ್ತಾಯವಾಗಿದೆ ಹಾಗೂ ಆರೋಪಿಗೆ

ಆಗದವರು ನಿಪಿ-1 ಚೆಕ್ಕನ್ನು ನನ್ನ ಮೂಲಕ ಬ್ಯಾಂಕಿಗೆ ಹಾಜರುಪಡಿಸಿ ಆತನ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇವೆಂದರೆ ಸಾಕ್ಷಿಯು ಆರೋಪಿಯು ನನಗೆ ಮೋಸ ಮಾಡುವ ಉದ್ದೇಶದಿಂದಲೇ ನಿಪಿ-1 ಚೆಕ್ಕನ್ನು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಆರೋಪಿಯು ಮಾತ್ರ ಕನ್ಸ್ ಟ್ರಕ್ಷನ್ ನ ಸೈನಿಂಗ್ ಅಥಾರಿಟಿ ಅಲ್ಲದ ಕಾರಣ ಆತನ ವಿರುದ್ಧ ಸುಳ್ಳು ದೂರು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಶೃಂಗೇರಿ.